ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಬೆಂಗಳೂರು, ಬುಧವಾರ ೫ನೇ ಅಕ್ಟೋಬರ್ ೧೯೮೮, ಆಶ್ವಯುಜ ೧೩, ೧೯೧೦ ಶಕ.

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೧೧-೦೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು ಶ್ರೀ ಬಿ.ಜಿ. ಬಣಕಾರ್‌ರವರು ಪೀಠವನ್ನು ಅಲಂಕರಿಸಿದರು

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ರಾಜ್ಯದ ಜಿಲ್ಲಾ ಪರಿಷತ್‌ಗಳಲ್ಲಿ ಅನುದಾನ ವ್ಯಯವಾಗದೇ ಉಳಿದಿರುವುದು

೨೯೩೦. ಶ್ರೀ ಬಿ. ಎಸ್. ಆಚಾರ್ (ಬೈದೂರು).— ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಜಿಲ್ಲಾ ಪರಿಷತ್‌ಗಳಲ್ಲಿ ೧೯೮೭-೮೮ನೇ ವರ್ಷದಲ್ಲಿ ಹಾಗೂ ವರ್ಷದ ಕೊನೆಯಲ್ಲಿ ಅನುದಾನ ವ್ಯಯವಾಗದೇ ಉಳಿದಿದೆಯೇ ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಆ) ಯಾವ ಯಾವ ಜಿಲ್ಲಾ ಪರಿಷತ್ತುಗಳಲ್ಲಿ ಯಾವ ಯಾವ ಶಿರೋನಾಮೆಯಡಿ ಎಷ್ಟೆಷ್ಟು ಹಣ ವ್ಯಯವಾಗದೆ ಉಳಿದಿದೆ ?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ).—

ಅ) ಹೌದು ೧೯೮೭-೮೮ನೇ ವರ್ಷವು ಪ್ರಾರಂಭಿಕ ವರ್ಷವಾದ್ದರಿಂದ ಕೆಲವು ಆಡಳಿತಾತ್ಮಕ ತೊಂದರೆಗಳಿಂದ ಬಿಡುಗಡೆಯಾದ ಪೂರ್ಣ ಹಣವನ್ನು ಖರ್ಚುಮಾಡಲು ಸಾಧ್ಯವಾಗಲಿಲ್ಲ.

ಆ) ಖರ್ಚಾಗದೆ ಉಳಿದಿರುವ ಹಣದ ವಿವರವನ್ನು ಅನುಬಂಧ 'ಅ' ನಲ್ಲಿ ಕೊಡಲಾಗಿದೆ.

ಅನುಬಂಧ–ಅ

ಜಿಲ್ಲಾ ಪರಿಷತ್ತುವಾರು ಯೋಜನೆ ಮತ್ತು ಯೋಜನೇತರರಲ್ಲಿನ ದಿನಾಂಕ ೩೧–೩–೮೮ ರವರೆಗೆ ಖರ್ಚಾಗದೆ ಉಳಿದಿರುವ ಹಣ

ಕ್ರಮ ಸಂಖ್ಯೆ	ಜಿಲ್ಲೆಗಳು	ಯೋಜನೆ			ಯೋಜನೇತರ		
		ಬಿಡುಗಡೆಯಾದ	ಖರ್ಚಾಗಿರುವ	ಉಳಿಕೆ	ಬಿಡುಗಡೆಯಾದ	ಖರ್ಚಾಗಿರುವ	ಉಳಿಕೆ
೧	೨	೩	೪	೫	೬	೭	೮
೧	ಬೆಂಗಳೂರು	೧೮೬೯.೩೨೦	೧೯೩೪.೯೭೦ (—)	೦೬೫.೬೫೦	೨೪೨೯.೩೪೦	೧೯೨೯.೫೮೦	೪೯೯.೭೬೦
೨	ಚಿತ್ರದುರ್ಗ	೨೦೩೫ ೦೬೦	೧೪೩೮.೦೬೭	೫೯೬.೮೯೩	೨೪೭೪.೭೦೫	೨೮೩೪.೭೫೮ (—)	೪೦೯.೯೭೩
೩	ಕೋಲಾರ	೨೫೧೦.೧೩೦	೧೮೬೭.೬೫೦	೬೪೨.೪೫೦	೨೪೨೬.೨೧೦	೬೮೩.೮೫೦ (—)	೨೫೭.೬೪೦
೪	ಶಿವಮೊಗ್ಗ	೨೨೩೭.೩೪೫	೧೫೬೮.೫೨೪	೬೬೮.೫೨೧	೨೫೧೧.೧೮೩	೩೫೮೦.೫೪೪ (—)	೧೦೬೯.೩೬೧
೫	ತುಮಕೂರು	೨೪೪೫.೭೯೫	೨೫೩೦.೫೯೨ (—)	೮೪.೭೯೭	೨೯೮೪.೫೬೧	೩೧೨೭.೪೮೪ (—)	೧೪೨೨.೯೨೩
೬	ಮೈಸೂರು	೨೫೮೨.೨೯೮	೨೫೯೭.೩೪೫	೯೮೪,೯೫೩	೩೫೯.೨೪೮	೮೬೦೭.೪೩೨ (—)	೭೮.೧೮೪
೭	ಚಿಕ್ಕಮಗಳೂರು	೧೪೬೫.೦೭೦	೧೧೩೨.೧೦೫	೩೩೨.೯೬೫	೧೭೩೨.೦೦೦	೧೮೦೯.೩೫೩ (—)	೮೭.೨೪೩
೮	ದಕ್ಷಿಣ ಕನ್ನಡ	೨೪೩೨.೯೧೦	೨೮೭೦.೪೭೦	೩೬೮,೪೪೦	೩೫೯.೨೩೦	೩೫೦.೯೪೦ (—)	೩೧.೭೧೦
೯	ಹಾಸನ	೨೦೪೬.೦೪೦	೧೭೮೨.೬೮೨	೨೬೩.೩೫೮	೨೧೯೫.೧೭೩	೨೬೭೬.೧೭೩ (—)	೪೪೧.೦೪೭
೧೦	ಕೊಡಗು	೧೦೧೭.೪೮೯	೯೦೯.೯೧೫	೧೦೭.೫೭೬	೯೩.೧೪೯	೭೧೩.೨೫೧ (—)	೨೭೯.೮೯೮
೧೧	ಮಂಡ್ಯ	೧೬೫೮.೩೮೨	೧೫೧೨.೫೮೦	೧೪೫.೮೦೨	೧೯೬೭.೯೪೪	೨೧೬೬.೨೪೦ (—)	೧೯೮.೨೯೬
೧೨	ಬೆಳಗಾಂ	೩೧೦೬.೪೯೦	೨೫೧೩.೫೯೯	೫೯೨.೮೯೧	೩೩೭೪.೬೧೦	೩೪೬೦.೧೭೦ (—)	೮೫೫.೫೬೦
೧೩	ಬಿಜಾಪುರ	೨೬೦೭.೮೨೮	೨೩೨೬.೧೨೮	೨೮೧.೦೦೦	೩೪೬೮.೧೯೦	೩೮೪೫ ೦೨೦ (—)	೩೭೬.೮೩೦
೧೪	ಧಾರವಾಡ	೩೫೭೮.೧೧೦	೨೭೪೪.೯೬೦	೮೩೩.೧೫೦	೪೧೮೯.೬೨೦	೪೧೫೪.೬೨೦	೩೫.೧೦೦
೧೫	ಉತ್ತರ ಕನ್ನಡ	೧೫೦೯.೯೮೦	೧೪೮೫.೬೭೦	೨೪.೩೧೦	೨೩೦೯.೫೬೦	೨೪೮೬.೮೬೦ (—)	೧೭೭.೩೦೦
೧೬	ಗುಲ್ಬರ್ಗ	೨೮೯೭.೬೭೦	೨೭೬೮.೦೪೦	೧೨೯.೬೩೦	೨೯೭೪.೮೪೦	೨೯೭೭.೧೧೦ (—)	೨.೨೭೦
೧೭	ಬಳ್ಳಾರಿ	೭೦೫೯.೩೦೦	೧೪೭೩.೮೨೫	೫೮೫.೯೭೭	೧೭೯೬.೫೩೦	೧೮೪೭.೫೭೭ (—)	೫೧.೨೪೭
೧೮	ಬೀದರ್	೧೧೨೩.೦೮೦	೧೮೦೪.೦೨೦	೧೧೮.೯೯೦	೧೨೪೨.೦೦೦	೧೪೨೬.೪೬೦ (—)	೮೪.೪೬೦
೧೯	ರಾಯಚೂರು	೨೨೧೨.೭೩೬	೧೫೫೨.೯೬೭	೬೫೯.೭೬೯	೨೪೧೩.೩೪೦	೨೦೫೦.೩೫೩	೩೬೨.೯೮೭

ಶ್ರೀ ಜಿ. ಎಸ್. ಆಚಾರ್.—ಆಡಳಿತಾತ್ಮಕವಾಗಿ ತೊಂದರೆಗಳು ಏನಂ ಎನ್ನುವುದನ್ನು ನಾನಂ ಕೇಳುತ್ತಿದ್ದೇನೆ. ಎರಡನೆಯದಾಗಿ ಸರ್ಕಾರ ಆಡಳಿತ ಸುಧಾರಣೆಗೆ ೯೦೦ ಕೋಟಿ ರೂಪಾಯಿಗಳನ್ನು ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತಿಗೆ ಕೊಟ್ಟಿದ್ದೇವೆಂದು ಹೇಳಿದರೂ ಕೂಡ ಅನುಬಂಧದಲ್ಲಿರುವಂತೆ ಶೇಕಡ ೧೦ ರಷ್ಟು ಉಳಿಕೆಯಾಗಿದೆ. ಕೆಲವು ಜಿಲ್ಲೆಗಳಲ್ಲಿಳಂತೂ ವಿಪರೀತ ಹಣ ಉಳಿದಿದೆ. ಮೈಸೂರು ಜಿಲ್ಲೆಯಲ್ಲಿ ಯೋಜನಾ ವೆಚ್ಚದಲ್ಲಿ ೯೮೪ ಲಕ್ಷ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೩೬೮ ಲಕ್ಷ, ಧಾರವಾಡದಲ್ಲಿ ೮೩೩ ಲಕ್ಷ, ರಾಯಚೂರಿನಲ್ಲಿ ೬೫೯ ಲಕ್ಷ ಯೋಜನೆಯಲ್ಲಿ. ೩೬೨ ಲಕ್ಷ ಯೋಜನೇತರದಲ್ಲಿ ವೆಚ್ಚದಲ್ಲಿ ಉಳಿದಿದೆ. ಬೆಂಗಳೂರು ಜಿಲ್ಲೆಯಲ್ಲಿ ೪೯೯ ಲಕ್ಷ ಯೋಜನೇತರ ವೆಚ್ಚದಲ್ಲಿ ಉಳಿದಿದೆ. ಹೀಗೆ ಅನೇಕ ವಿಭಾಗಗಳಲ್ಲಿ ಹಣ ಖರ್ಚು ಮಾಡದೆ ಉಳಿಯುವುದಕ್ಕೆ ಕಾರಣವೇನು ? ಮಂಡಲ ಪಂಚಾಯತಿಗೆ ೫ ಸಾವಿರಕ್ಕಿಂತ ಹೆಚ್ಚಿಗೆ ಕಳೆದ ವರ್ಷ ಖಜಾನೆಯಿಂದ ತೆಗೆಯಬಾರದೆಂದು ಹೇಳಿದ್ದರೂ ಕೂಡ ೧೫ ಸಾವಿರದವರೆಗೆ ತೆಗೆದಿದ್ದಾರೆ: ಈ ರೀತಿ ರಿಸ್ಟ್ರಿಕ್ಷನ್ ಇಟ್ಟಿದ್ದರೂ ಯಾವರೀತಿ ವಿನಿಯೋಗ ಮಾಡಲಿಕ್ಕೆ ಸಾಧ್ಯವಾಯಿತು. ಮೂರನೆಯದಾಗಿ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತಿಗಳಲ್ಲಿ ಸಂಪೂರ್ಣವಾದ ಅಧಿಕಾರ ಕೊಡುತ್ತೇವೆಂದು ಘೋಷಣೆ ಮಾಡಿದ್ದರೂ ಕೂಡ ಒಂದು ಹೆಡ್‌ನಿಂದ ಮತ್ತೊಂದು ಹೆಡ್‌ಗೆ ಶೇಕಡ ೧೦ ರಷ್ಟು ಬದಲಾವಣೆ ಮಾಡಲು ಅಧಿಕಾರ ಇರುವುದಿಲ್ಲ. ಇದರಿಂದಾಗಿ ಜಿಲ್ಲಾ ಪರಿಷತ್ತು ಪ್ರಾರಂಭವಾಗುವ ಮೊದಲೇ ಸರ್ಕಾರ ಪ್ರಾರಂಭಿಸಿದ ಅನೇಕ ಅಪೂರ್ಣ ಕಾಮಗಾರಿಗಳು ಹಾಗೆಯೇ ಇವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು ೧.೫ ಕೋಟಿ.....

ಅಧ್ಯಕ್ಷರು.—ನೀವು ಭಾಷಣ ಮಾಡುವುದಕ್ಕೆ ಹೊರಟಿದ್ದೀರೋ ಅಥವಾ ಪ್ರಶ್ನೆ ಕೇಳುವುದಕ್ಕೆ ಹೋರಟಿದ್ದಿರೋ, ನೇರವಾಗಿ ಪ್ರಶ್ನೆ ಕೇಳಿ.

ಶ್ರೀ ಜಿ. ಎಸ್. ಆಚಾರ್.—ನಾನು ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಅಪೂರ್ಣವಾಗಿರತಕ್ಕ ಕಾಮಗಾರಿಗಳಿಗೆ ವಿನಿಯೋಗಿಸಲಿಕ್ಕೆ ಏತಕ್ಕೆ ಅನುಮತಿ ಕೊಡಬಾರದೆಂದು ನಾನು ಕೇಳುತ್ತಿದ್ದೇನೆ.

ಶ್ರೀ ಎಂ. ಪಿ. ಪ್ರಕಾಶ್.—ಸನ್ಮಾನ್ಯ ಅಧ್ಯಕ್ಷರೇ, ೧೯೮೭-೮೮ನೇ ಸಾಲಿನ ವರ್ಷ ಪ್ರಾರಂಭಿಕ ವರ್ಷವಾದ್ದರಿಂದ ಕೆಲವು ಅಧಿಕಾರಿಗಳನ್ನು ಜಿಲ್ಲಾಪರಿಷತ್‌ಗಳಿಗೆ ನಿಯೋಜನೆ ಮಾಡತಕ್ಕ ಸಂದರ್ಭದಲ್ಲಿ ವಿಳಂಬವಾಗಿರುವುದು ಒಂದು ಕಾರಣ. ಮತ್ತೊಂದು ಕಾರಣ ಅಂದರೆ ಅನೇಕ ಸಂದರ್ಭಗಳಲ್ಲಿ ಬಿಡುಗಡೆಯಾಗಿರತಕ್ಕ ಹಣ ತಡವಾಗಿ ಬಿಡುಗಡೆಯಾದ್ದರಿಂದ ವರ್ಷದ ಅಂತ್ಯದ ವೇಳೆಯಲ್ಲಿ ಖರ್ಚು ಮಾಡದೇ ಈ ತರಹ ಆಗಿದೆ. ಹೊಸದಾಗಿ ಈ ವಿಚಾರಗಳ ಬಗ್ಗೆ ತಿಳುವಳಿಕೆ ಕೊಡಬೇಕಾದ ಅಗತ್ಯವಿತ್ತು. ಚುನಾಯಿತರಾಗಿರತಕ್ಕ ಪದಾಧಿಕಾರಿಗಳಿಗೆ, ನಿಯೋಜಿಸಲ್ಪಟ್ಟಿರತಕ್ಕ ಬೇರೆ ಬೇರೆ ಇಲಾಖೆಗಳಿಂದ ಬಂದಿರತಕ್ಕ ಅಧಿಕಾರಿಗಳಿಗೆ ಲೆಕ್ಕಪತ್ರ ಮತ್ತಿತರ ವಿಚಾರಗಳಲ್ಲಿ ತರಬೇತಿ ಇಲ್ಲದೇ ಇದ್ದುದರಿಂದ ಬಿಡುಗಡೆಯಾದಂಥ ಹಣ ಖರ್ಚಾಗಿಲ್ಲ. ಇನ್ನು ಶೇಕಡ ಹತ್ತಕ್ಕಿಂತಲೂ ಹೆಚ್ಚು ಖರ್ಚು ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವಂತಾದ್ದು ಏನಿದೆ ಇದರ ಬಗ್ಗೆ ಸರ್ಕಾರ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ, ಈ ಪ್ರಶ್ನೆಗೆ ಉತ್ತರ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಜಿ. ಎಸ್. ಆಚಾರ್.—ಸಿಬ್ಬಂದಿ ಕೊರತೆಯ ವಿಚಾರವನ್ನು...

ಶ್ರೀ ಎಂ. ಪಿ. ಪ್ರಕಾಶ್.—ಸಿಬ್ಬಂದಿ ಕೊರತೆಯ ವಿಚಾರವನ್ನು ನಾನು ಹೇಳಲಿಲ್ಲ. ನಿಯೋಜನೆ ಮಾಡತಕ್ಕ ಸಂದರ್ಭದಲ್ಲಿ ವಿಳಂಬವಾಗಿರುವುದನ್ನು ಹೇಳಿದ್ದೇನೆ.

ಶ್ರೀ ಜಿ. ಎಸ್. ಆಚಾರ್.—ನಮ್ಮ ಜಿಲ್ಲಾ ಪರಿಷತ್‌ನಲ್ಲಿ ಪಟ್ಟಿಯಿದೆ. ಇನ್ನೂ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೨೪ ವಿಭಾಗಗಳಲ್ಲಿ ೧೮೭೬ ನೇಮಕಗಳು ಇನ್ನೂ ಆಗಲಿಕ್ಕೆ ಇದೆ. ಈ ವಿಷಯದ ಬಗ್ಗೆ ಸರ್ಕಾರಕ್ಕೆ ಮಾಹಿತಿ ಕಳುಹಿಸಿದ್ದಾರೆ. ಈ ರೀತಿಯ ಸಿಬ್ಬಂದಿ ಕೊರತೆ ಹೀಗೆಯೇ ಮುಂದುವರಿಯುತ್ತದೆಯೇ ಹೇಗೆ ? ನಿಜವಾಗಿಯೂ ಸರ್ಕಾರ ಈ ಸಿಬ್ಬಂದಿಯನ್ನು ತುಂಬಿಸುತ್ತಾರೆಯೋ ಇಲ್ಲವೋ, ತಿಳಿಸಬೇಕು. ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್ ವ್ಯವಸ್ಥೆಯನ್ನು ಸಂಪೂರ್ಣವಾಗಿ ಸುವ್ಯವಸ್ಥಿತ ರೀತಿಯಲ್ಲಿ ತೆಗೆದುಕೊಂಡು ಹೋಗಬೇಕೆಂಬ ಇಚ್ಛೆ ಇದ್ದರೆ, ಈ ಸಿಬ್ಬಂದಿಯ ನೇಮಕ ಯಾವಾಗ ಆಗುತ್ತದೆ ? ಈ ವರ್ಷವಾದರೂ ಸಂಪೂರ್ಣವಾಗಿ ಕೊಡಲ್ಪಟ್ಟ ಹಣವನ್ನು ವ್ಯಯ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ಪಿ. ಪ್ರಕಾಶ್.—ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್‌ಗೆ ಅಧಿಕಾರ ವಿಕೇಂದ್ರೀಕರಣ ಮಾಡಬೇಕೆನ್ನುವುದೇ ಸರ್ಕಾರದ ಒಂದು ದೊಡ್ಡ ಮೈಲಿಗಲ್ಲು. ಮಾನ್ಯ ಸದಸ್ಯರು ಇವರೆಲ್ಲಿ ಸರ್ಕಾರಕ್ಕೆ ನಂಬಿಕೆ ಇದೆಯೇ ಎಂದು ಕೇಳುವ ಪ್ರಶ್ನೆ ಅಗತ್ಯವಿಲ್ಲ. ಇದರಲ್ಲಿ ನಮಗೆ ಸಂಪೂರ್ಣ ನಂಬಿಕೆ ಇದೆ. ಪದಾಧಿಕಾರಿಗಳು ಮತ್ತು ಆಡಳಿತಾತ್ಮಕ ತೊಂದರೆ ಅಂದರೆ ನಿಯೋಜನೆ ಮಾಡತಕ್ಕ ಸಂದರ್ಭದಲ್ಲಿ ತಡವಾಗಿ ಬಂದಿದ್ದಾರೆ. ಅನುಭವದ ತೊಂದರೆಯ ಕಾರಣದಿಂದ ಹಣದ ಬಿಡುಗಡೆಯಾಗುವ ಸಂದರ್ಭದಲ್ಲಿ ತೊಂದರೆಯಾಗಿದೆ. ಇನ್ನು ಖಾಲಿ ಹುದ್ದೆಗಳನ್ನು ತುಂಬುವುದಕ್ಕೆ ಎಲ್ಲಾ ರೀತಿಯ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು.—ಮಾನ್ಯ ಅಡ್ಯಂತಾಯ ಅವರೆ ತಮ್ಮ ಪ್ರಶ್ನೆಗೆ ಸಮಯ ಬೇಕೆಂದು ಕೇಳಿದ್ದಾರೆ.

ಶ್ರೀ ಎನ್. ಎಂ. ಅಡ್ಯಂತಾಯ.— ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಪ್ರತಿಸಲ ಸಮಯ ಕೇಳುತ್ತಿದ್ದಾರೆ, ಕಾರಣ ಏನು ಗೊತ್ತಾಗಲಿಲ್ಲ.

ಅಧ್ಯಕ್ಷರು.—ನಿಮ್ಮ ಪ್ರಶ್ನೆ ಬಹಳ ಮಹತ್ವದ್ದು ಇರುತ್ತದೆ.

ಶ್ರೀ ಎನ್. ಎಂ. ಅಡ್ಯಂತಾಯ.—ಟೈಮ್ ಕೊಡುವುದಿಲ್ಲ, ಟೈಮ್ ಬಾಂಡ್ ಆದರೂ ಮಾಡಿಬಿಡಿ.

ಅಧ್ಯಕ್ಷರು.—ಮಾನ್ಯ ದೇವಪಾಂಡೆಯವರೇ, ಮಾನ್ಯ ಸದಸ್ಯರಿಗೆ ಯಾವಾಗ ಉತ್ತರ ತರಿಸಿ ಕೊಡುತ್ತೀರಿ ?

ಶ್ರೀ ಆರ್, ವಿ. ದೇಶಪಾಂಡೆ —ಅಧ್ಯಕ್ಷರೇ, ಆದಷ್ಟು ಬೇಗ ತರಿಸಿಕೊಡುತ್ತೇನೆ.

ಅಧ್ಯಕ್ಷರು.—ಮಾನ್ಯ ಅಡ್ಯಂತಾಯ ಅವರೇ, ನಾನು ನಿಮ್ಮ ಪರವಾಗಿ ಆದಷ್ಟು ಬೇಗ ಉತ್ತರ ತರಿಸಿಕೊಡಲಿಕ್ಕೆ ಹೇಳುತ್ತೇನೆ, ದಯಮಾಡಿ ತಾವು ಕುಳಿತುಕೊಳ್ಳಿ.

ಶ್ರೀ ಎನ್. ಎಂ. ಅಡ್ಯಂತಾಯ.—ಅಧ್ಯಕ್ಷರೇ, ಇದು ಬಹಳ ಮುಖ್ಯವಾದ ಪ್ರಶ್ನೆ.

ಅಧ್ಯಕ್ಷರು.—ಅಸೆಂಬ್ಲಿ ಮುಗಿದರೂ ಕೂಡ ನಾನು ತಮಗೆ ಉತ್ತರ ಕಳುಹಿಸಿಕೊಡುತ್ತೇನೆ. ತಾವು ದಯಮಾಡಿ ಕುಳಿತುಕೊಳ್ಳಿ.

ಕರ್ನಾಟಕ ಗೃಹ ಮಂಡಳಿಯವರು ಹರಪನ ಹಳ್ಳಿಯಲ್ಲಿ ಕಟ್ಟಿಸಿದ ಎಲ್‌ಐಜಿ ಮನೆಗಳ ಬಗೆ

೪೦೪೮. ಶ್ರೀ ಬಿ. ಹೆಚ್. ಯಂಕನಾಯ್ಕ (ಹರಪನ ಹಳ್ಳಿ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ಗೃಹ ಮಂಡಳಿಯವರು ಹರಪನಹಳ್ಳಿಯಲ್ಲಿ ಕಟ್ಟಿಸಿರುವ ಎಲ್‌ಐಜಿ ಮನೆಗಳನ್ನು ಮಂಜೂರು ಮಾಡುವಾಗ ನಿಗದಿಪಡಿಸಿದ ಮೊತ್ತ ರೂ. ೨೨,೦೦೦.೦೦ ಸ್ವಾಧೀನಕ್ಕೆ ಕೊಡುವ ಸಮಯದಲ್ಲಿ ರೂ. ೫೫,೦೦೦.೦೦ಕ್ಕೆ ಏರಿಸಿರುವುದು ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ರೀತಿಯ ಏರಿಕೆಯಿಂದ ಬಡವರಿಗೆ ಬಹಳ ತೊಂದರೆ ಉಂಟು ಮಾಡುವುದು ನಿಜವೇ ?

ಇ) ಹಾಗಿದ್ದಲ್ಲಿ, ಇಂತಹ ಪ್ರಕರಣಗಳಲ್ಲಿ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗೆ ರಿಯಾಯ್ತಿಗಳನ್ನು ಕೊಟ್ಟು ರೂ. ೨೨,೦೦೦ಕ್ಕೆ ಮನೆಗಳನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗಿದೆಯೇ ?

ಈ) ಈಗ ಎಲ್‌ಐಜಿ ಮನೆಗಳನ್ನು ದಾವಣಗೆರೆ ಹಾಗೂ ಕೊಟ್ಟೂರುಗಳಲ್ಲಿ ರೂ. ೨೨,೦೦೦ಕ್ಕೆ ಮಂಜೂರು ಮಾಡುವುದು ನಿಜವೇ ?

ಶ್ರೀ ಆರ್.ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಬಂದಿದೆ.